
ಕಣ್ಣಲ್ಲಿ ತೂಗುತ್ತಾ, ಮನೆಗೆಲಸದ ನಾಗಮ್ಮ ಇವತ್ತು ಬರುವುದಿಲ್ಲ ಎಂದಿದ್ದಾಳೆ ಎಂಬ ಆತಂಕ ಇನ್ನೊಂದೆಡೆ ಜಗ್ಗುತ್ತಾ, ಈ ಒಣ ವೇದಾಂತದ ಸವೆದ ನಾಣ್ಯದಂತಹ ಮಾತು ಹೊರತುಪಡಿಸಿದರೆ ಇನ್ನಾವ ಪದಗಳೂ ಹೊಳೆಯುತ್ತಿಲ್ಲ. 'ಆ ದೇವರು ಇಡೀ ಜಗತ್ತಿಗೆ ಸುಖವನ್ನು ದೊಡ್ಡ ಸೇರಿನಲ್ಲಿ ಅಳೆದುಕೊಟ್ಟರೆ, ನನಗೆ ಚಟಾಕುದಲ್ಲಿಯೂ ಅಳೆದುಕೊಡಲಿಲ್ಲ... ಎಲ್ಲರೂ ಒಂದಲ್ಲ ಒಂದು ಬಗೆಯ ಬೆಚ್ಚನೆಯ ಬಾಂಧವ್ಯದ ನೆಮ್ಮದಿಯಲ್ಲಿದ್ದಾಗ ನಾನೊಬ್ಬಳೇ ಒಂಟಿಗೂಬೆ ಹಂಗೆ ರಾತ್ರಿ ಕಳೆಯೋದು ಹೆಂಗಪ್ಪಾ ಅನ್ನೋ ಯೋಚನೇಲಿ ನಿದ್ದೆ ಕಡಿದು ಹೋಗಿ ಎದ್ದು ಕೂತಿರ್ತೀನಿ. ಹಂಗೆ ಕೂತಾಗ ಮತ್ತೆ ಅದೇ ಚಿತ್ರ ಕಣ್ಣಲ್ಲಿ... ರಾತ್ರಿ ಕತ್ತಲೆಯಲ್ಲಿ ಸಿದ್ಧಾರ್ಥ ಸೇತುವೆ ಮೇಲೆ ನಿಂತಾಗಲೂ ಹಿಂಗೇ ಅನ್ನಿಸಿರಬೌದಲ್ಲ ಅನ್ನಿಸಿ ಇನ್ನಷ್ಟು ಸಂಕಟವಾಗುತ್ತೆ...' ಮೇಗಲೆ ಅಳು ನುಂಗಲೆತ್ನಿಸುತ್ತಾ, ತಗ್ಗಿದ ದನಿಯಲ್ಲಿ ತಡೆತಡೆದು ಹೇಳುತ್ತಿದ್ದಳು.



ವಿನುತಾಳಿಗೆ ಬೆಳ್‌ಬೆಳಗ್ಗೆ ಇದೆಲ್ಲ ರಗಳೆ ಎನ್ನಿಸುತ್ತಾ ಕಿರಿಕಿರಿಯಾಯಿತು. ಅಷ್ಟೇ ಫಟಕ್ಕನೆ ಮನದಲ್ಲಿ ತೆರೆದುಕೊಂಡಿದ್ದು ಬೇರೆಯದೇ ತುಣುಕು ಚಿತ್ರಗಳು. ವಿನುತಾ ಈ ಮೊದಲು ಕೃಷಿಗೆ ಸಂಬಂಧಿಸಿದ ಒಂದು ಪ್ರಾಜೆಕ್ಟಿನಲ್ಲಿ ಕೆಲಸ ಮಾಡುವಾಗ ರೈತರ ಆತ್ಮಹತ್ಯೆಗೆ ಸಂಬಂಧಿಸಿದ ಡೇಟಾ ಸಂಗ್ರಹಣೆ, ಕ್ಷೇತ್ರಕಾರ್ಯಕ್ಕೆ ಸಹಾಯ ಮಾಡಿದ್ದಳು. ಆತ್ಮಹತ್ಯೆ ಮಾಡಿಕೊಂಡ ಒಬ್ಬೊಬ್ಬ ರೈತನದೂ ಅವರದೇ ಆದ ಸಂಕಟಗಳು. ಸಾಲದ ಸುಳಿ ಒಂದೇ ಆದರೂ ಆ ಸುಳಿಯ ಒಳರಭಸ, ಅದರ ಒಟ್ಟೂ ಪರಿಣಾಮ ಬೇರೆಬೇರೆ. ಈಗಲೂ ಪ್ರತಿದಿನ ಪೇಪರು ಓದುವಾಗ ಎಲ್ಲಾದರೂ ರೈತರ ಆತ್ಮಹತ್ಯೆ ಸುದ್ದಿ ಕಂಡರೆ, ವಿನುತಾಳ ಬೆರಳುಗಳು ಬೇರೆಲ್ಲದಕ್ಕಿಂತ ಆ ಸುದ್ದಿಯನ್ನು ಹೆಚ್ಚು ತಡಕಾಡುತ್ತದೆ. ಪ್ರತಿದಿನ ಒಂದಲ್ಲ ಒಂದು ಕಡೆ ರೈತರ ಆತ್ಮಹತ್ಯೆ ಎಂಬ ಸುದ್ದಿ ಕಣ್ಣಿಗೆ ಬೀಳುತ್ತಲೇ ಇರುತ್ತದೆ... ಸಿದ್ಧಾರ್ಥನಂತಹ ಸಿರಿವಂತ ಉದ್ಯಮಿಯ ಆತ್ಮಹತ್ಯೆ ಇವಳನ್ನು ಇಷ್ಟು ಬಾಧಿಸಿದಂತೆ, ಯಾಕೆ ಯಾವುದೇ ರೈತನ ಆತ್ಮಹತ್ಯೆ ಬಾಧಿಸುವುದಿಲ್ಲ' ಎಂಬ ವಿತಂಡಪ್ರಶ್ನೆಯೊಂದು ವಿನುತಾಳ ಮನದೊಳಗೆ ಎದ್ದು ನಿಂತಿತು.

'ನಿಂದ್ಯಾಕೋ ಅತಿಯಾಯಿತು ಕಣೇ... ಮತ್ತೆ ಮತ್ತೆ ಸಿದ್ಧಾರ್ಥನ ಆತ್ಮಹತ್ಯೆಯ ನೆನಪು ಮಾಡಿಕೊಳ್ಳುತ್ತಾ ನೀನು ಇನ್ನಷ್ಟು ಡಿಪ್ರೆಸ್ ಆಗ್ತಿದೀಯಾ... ಆ ಥರಾ ಸಾಲದ ಸುಳಿಗೆ ಸಿಕ್ಕು, ಬದುಕನ್ನು ಇನ್ನು ಎದುರಿಸೋದಕ್ಕೆ ಆಗೋದೇ ಇಲ್ಲ ಅನ್ನಿಸಿ, ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಳ್ತಾರೆ ಅಲ್ಲವಾ...' ಅಂಥದ್ದೇ ಸಾಲದ ಸುಳಿಗೆ ಸಿಕ್ಕು ಬದುಕು ಕೊನೆಯಾಗಿಸಿಕೊಂಡವರ ಬಡವರ ಆತ್ಮಹತ್ಯೆಗಳು ನಿನ್ನನ್ನು ತಟ್ಟೋದಿಲ್ಲ, ಸಿದ್ಧಾರ್ಥನ ಆತ್ಮಹತ್ಯೆ ಯಾಕೆ ಬಾಧಿಸುತ್ತಿದೆ ಎಂಬುದನ್ನು ಬಾಯಿ ಬಿಟ್ಟು ಕೇಳಲಾಗದೇ, ತನ್ನ ವಿತಂಡಪ್ರಶ್ನೆಯನ್ನು ಅವಳ ಖಿನ್ನತೆಗೆ ಹೇಗೆ ಕೊಂಡಿಯಾಗಿಸುವುದು ಎಂಬುದು ಥಟ್ಟನೆ ಹೊಳೆಯದೇ, ಈರುಳ್ಳಿ ಹೆಚ್ಚಲು ಶುರು ಮಾಡಿದವಳು ಗಕ್ಕನೆ ನಿಂತಳು.

ಮೇಗಲೆ ಮಾತಾಡಲಿಲ್ಲ.

'ನೀನು ಬೆಳ್‌ಬೆಳಗ್ಗೆ ಅದನ್ನೇ ಮತ್ತೆ ನೆನಪು ಮಾಡಿಕೋತ ಇಡೀ ದಿನ ಅದರಲ್ಲೇ ಕಳೀಬೇಡ ಮೇಗಲೆ... ನಿನ್ನ ಬಿಟ್ಟು ಬೇರೆಯವರೆಲ್ಲ ಭಾರೀ ಸಾಂಸಾರಿಕ ಸುಖದಲ್ಲಿದ್ದಾರೆ ಅಂತ ನೀನು ಅಂದುಕೊಳ್ಳದೂ ಒಂಥರಾ ಭ್ರಮೆಯೇ. ಎಲ್ಲರ ಮನೆ ದೋಸೆಯೂ ತೂತೇ... ಒಬ್ಬರಿದ್ದು ಹೆಚ್ಚು, ಒಬ್ಬರಿದ್ದು ಕಡಿಮೆ ಅಷ್ಟೆ. ಅದೇನೋ ಹೇಳ್ತಾರಲ್ಲ ಹಾಡ್ತಾ ಹಾಡ್ತಾ ರಾಗ, ನರಳ್ತಾ ನರಳ್ತಾ ರೋಗ ಅಂತ... ಹಂಗೆ ನೀನು ಬರೀ ನಿನ್ನ ಬಗ್ಗೆ, ಸಿಸಿಡಿಯ ಸಿದ್ಧಾರ್ಥನ ಆತ್ಮಹತ್ಯೆ ಬಗ್ಗೆ ಯೋಚಿಸ್ತಾ ಅವೆರಡೇ ಸಂಗತಿ ನಿನ್ನ ಹೆಬ್ಬಾವಿನಂಗೆ ಸುತ್ತಿಕೊಳ್ಳುತ್ತೆ ಅಷ್ಟೆ. ಸ್ವಲ್ಪ ಪಾಸಿಟಿವ್ ಆಗಿ, ಪ್ರಾಕ್ಟಿಕಲ್ ಆಗಿ ಯೋಚನೆ ಮಾಡು... ಬೇರೆ ಯಾವುದರಲ್ಲಾದರೂ ಎಂಗೇಜ್ ಆಗು...' ತಾನು ತುಸು ಒರಟಾದ ದನಿಯಲ್ಲಿ ಉಪದೇಶಾಮೃತವನ್ನು ಅವಳ ಕಿವಿಯಲ್ಲಿ ಸುರಿಯುತ್ತಿದ್ದೇನೆ ಎಂಬುದು ಕೊನೆಯ ವಾಕ್ಯ ಹೇಳುವಷ್ಟರಲ್ಲಿ ವಿನುತಾಳ ಅರಿವಿಗೆ ಬರುತ್ತಾ, ವಾಕಿಂಗ್ ಮುಗಿಸಿ, ಸದ್ದು ಮಾಡದೇ ಡೈನಿಂಗ್ ಟೇಬಲ್ಲಿನ ಬಳಿ ಬಂದು ನಿಂತಿದ್ದ ರಮೇಶ, ಕೈಸನ್ನೆಯಲ್ಲೇ ಯಾರೆಂದು ಕೇಳಿದ್ದು ಕಾಣುತ್ತಾ, ಥಟ್ಟನೆ ಮಾತು ನಿಲ್ಲಿಸಿದಳು.